ಓ.ಎಸ್.ನಂ.27/2019
ಪಿ ಡಬ್ಲ್ಯೂ: 1

**ದಿನಾಂಕ 17.12.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ ಬಿ.ಕೆ.ಪಿ. ವಕೀಲರಿಂದಃ**

ದಾವಾ ಸ್ವತ್ತಿನ ಸ.ನಂ.72 ಇರುತ್ತದೆ. ದಾವಾ ಸ್ವತ್ತು 1978-79 ರಲ್ಲಿ ನನಗೆ ಮಂಜೂರಾಗಿರುತ್ತದೆ. ದಾವಾ ಸ್ವತ್ತು ಸ.ನಂ.72 ರ ಸ್ವತ್ತು ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ಸ.ನಂ.25/2 ರ ಜಮೀನು ಸ.ನಂ.71 ಇರುತ್ತದೆ ಎಂದು ನಾನು ತಹಶೀಲ್ದಾರರಿಗೆ ಅರ್ಜಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸ.ನಂ.25/2 ಪಿ2 ಜಮೀನನ್ನು ಸ.ನಂ.71 ಎಂದು ಮಾಡಿಕೊಡಿ ಎಂದು ನಾನು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸ.ನಂ.25/10 ರ ಜಮೀನನ್ನು ಸ.ನಂ.71 ಎಂದು ಮಾಡಿರುವುದನ್ನು ರದ್ದುಪಡಿಸಿ ಸ.ನಂ.25/2 ಪಿ2 ಜಮೀನನ್ನು ಸ.ನಂ.71 ಎಂದು ಮಾಡಿ ಎಂದು ಅರ್ಜಿ ಸಲ್ಲಿಸಿ, ಆ ಪ್ರಕಾರ ಪಹಣಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ಸ.ನಂ.25/2 ರಲ್ಲಿ ನಾನು ಕ್ರಯಕ್ಕೆ ಪಡೆದಿರುವ ಜಮೀನು ಇದ್ದು, ಸದರಿ ಜಮೀನನ್ನು ಸ.ನಂ.71 ಎಂದು ಮಾಡಿಕೊಡಿ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಕ್ರಯ ಪತ್ರ ಸಂಖ್ಯೆಃಎಸ್ ಆರ್.1844/74-75 ರ ಅಡಿಯಲ್ಲಿ ಖರೀದಿಸಿದ ಜಮೀನಿನ ಬಗ್ಗೆ ನನ್ನ ಅಣ್ಣನಿಗೆ ಮಾಹಿತಿ ಇರುತ್ತದೆ. ನನ್ನ ಅಣ್ಣನ ಹೆಸರು ಈರಪ್ಪ ಇರುತ್ತದೆ.

ಕ್ರಯ ಪತ್ರ ಸಂಖ್ಯೆಃಎಸ್ ಆರ್.1844/74-75 ರ ಪ್ರಕಾರ ಸ.ನಂ.25/10, ಹೊಸ ನಂ.71 ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನು ಮತ್ತು ದಾವಾ ಸ್ವತ್ತು ಬೇರೆ ಬೇರೆ ಸ್ವತ್ತುಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ ಮೂಲಕ ಖರೀದಿಸಿದ ಜಮೀನಿಗೆ ದಾವಾ ಸ್ವತ್ತಿನ ಸ.ನಂಬರ್ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸ.ನಂ.25/2 ಪಿ2 ನ್ನು ರದ್ದು ಮಾಡಿ ಸ.ನಂ.71 ನ್ನು ನನ್ನ ಹೆಸರಿಗೆ ಮಾಡಿ ಎಂದು ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 2016 ನೇ ಸಾಲಿನಲ್ಲಿ ತಹಶೀಲ್ದಾರ್ ರವರಿಗೆ ಆ ರೀತಿ ಅರ್ಜಿ ಕೊಟ್ಟಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸ.ನಂ.25/10 ಹೊಸ ನಂಬರ್ 71 ರ ಜಮೀನು 2013-14 ನೇ ಸಾಲಿನವರೆಗೂ ತಳವಾರ್ ರಾಜಣ್ಣನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಜಮೀನನ್ನು 1974-75 ರಲ್ಲಿ ಖರೀದಿಸಿರುತ್ತೇವೆ ಎಂದರೆ ಸರಿ. ಅಲ್ಲಿಂದ 2013-14 ನೇ ಸಾಲಿನವರೆಗೂ ಖಾತೆ ಬದಲಾವಣೆ ಆಗಿರಲಿಲ್ಲ ಎಂದರೆ ಸರಿ. ಸದರಿ ಜಮೀನಿನ ಖಾತೆ ಬದಲಾವಣೆ ಮಾಡಿಸಿಕೊಳ್ಳುವ ಕಾಲಕ್ಕೆ ದಾವಾ ಸ್ವತ್ತಿನ ಪಹಣಿಯನ್ನು ಕೊಟ್ಟು ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ.25/10 ಹೊಸ ನಂ.71 ರ ಜಮೀನು 2016 ರಲ್ಲಿ ನನ್ನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಪಾಲಿಗೆ ಬಂದ ಜಮೀನುಗಳಿಗೆ ಸಂಬಂಧಿಸಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಪಾಲು ವಿಭಾಗದಲ್ಲಿ ಸ.ನಂ.72 ರ ಜಮೀನನ್ನು ಹಂಚಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಳೇ ಸ.ನಂ.25 ನ್ನು ಹಂಚಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಎಷ್ಟು ಇವೆ ಎಂದು ಪಾಲು ವಿಭಾಗ ಪತ್ರ ನೋಡಿದರೆ ಗೊತ್ತಾಗುತ್ತದೆ. ನಾನು ಕ್ರಯಕ್ಕೆ ಪಡೆದ ತಳವಾರ ರಾಜಣ್ಣನ ಜಮೀನಿಗೆ ಸಂಬಂಧಿಸಿ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಸ.ನಂ.25/2 ಪಿ2 ಜಮೀನು 71 ರ ಜಮೀನಾಗಿರುತ್ತದೆ ಎಂದು ಸುಳ್ಳು ಮಾಹಿತಿ ನೀಡಿ ರೂ.55 ಲಕ್ಷ ಪರಿಹಾರ ಧನವನ್ನು ಭೂಸ್ವಾಧೀನಾಧಿಕಾರಿಗಳಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ತಳವಾರ ರಾಜಣ್ಣರವರ ಕಡೆಯಿಂದ ಸ.ನಂ.25/11 ರ ಜಮೀನನ್ನು ಖರೀದಿಸಿದ್ದೆವು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣನಿಗೆ ಸದರಿ ವಿಚಾರ ಗೊತ್ತಿರುತ್ತದೆ ಎಂದರೆ ಸರಿ. ಸ.ನಂ.25/10 ರ ಜಮೀನಿಗೆ ಸಂಬಂಧಿಸಿ ಪಾಲು ವಿಭಾಗ ಆಗಿರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಸ.ನಂ.25 ರ ಜಮೀನು 12 ಜನಕ್ಕೆ ಮಂಜೂರಾಗಿತ್ತು ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಸ.ನಂ.66 ರಿಂದ 73 ರವರೆಗೆ ಹೊಸ ಸ.ನಂಬರ್ ಗಳನ್ನು ನೀಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ.25/11 ರ ಜಮೀನು ಹೊಸ ನಂ.72 ನ್ನು 1973 ರಲ್ಲಿ ನನಗೆ ಮಂಜೂರು ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.25/2 ರ 4 ಎಕರೆ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿ ಇರುತ್ತೇನೆಂದು ಬರೆಸಿರುತ್ತೇನೆ ಎಂದರೆ ಸರಿ. ಸದರಿ 4 ಎಕರೆ ಜಮೀನಿನಲ್ಲಿ ನಾನು ಮತ್ತು ನನ್ನ ಅಣ್ಣ ತಲಾ 2 ಎಕರೆಯಲ್ಲಿ ಸ್ವಾಧೀನದಲ್ಲಿ ಇರುತ್ತೇವೆ. ನಾನು ಮತ್ತು ನನ್ನ ಅಣ್ಣ 4 ಎಕರೆ ಜಮೀನಿನಲ್ಲಿ ಸ್ವಾಧೀನ ಇರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7 ನೇ ಪ್ರತಿವಾದಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸರ್ಕಾರದಿಂದ ಜಮೀನನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ದ್ರಾಕ್ಷಾಣಮ್ಮ ಎಂಬ ಮಗಳು ಇರುತ್ತಾಳೆ ಎಂದರೆ ಸರಿ. ಸದರಿ ದ್ರಾಕ್ಷಾಣಮ್ಮನಿಂದ ನಾನು ಪಾಲು ವಿಭಾಗದ ದಾವೆ ಹೂಡಿಸಿರುತ್ತೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಸರ್ಕಾರದ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಸ.ನಂ.25/11 ರ ಜಮೀನನ್ನು ಅಕ್ರಮವಾಗಿ ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯೇ ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದರೂ ಸಹ ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿ ಪತ್ರ ಬರೆದಿರುತ್ತೇನೆ ಎಂದರೆ ಸರಿಯಲ್ಲ.

7 ನೇ ಪ್ರತಿವಾದಿಗೆ ಮಂಜೂರು ಮಾಡಿದ ಜಮೀನಿಗೆ ಸಂಬಂಧಿಸಿ ಮಂಜೂರು ಪ್ರಮಾಣ ಪತ್ರವನ್ನು ರದ್ದುಪಡಿಸಲು ಪತ್ರ ಬರೆದಿದ್ದೆ ಎಂದರೆ ಸರಿ. ಇಲ್ಲಿಯವರೆಗೂ ಮಂಜೂರು ರದ್ದತಿ ಆಗಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಅಕ್ರಮವಾಗಿ 4 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 7 ನೇ ಪ್ರತಿವಾದಿ ಸ.ನಂ.72 ರಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ಖಾತೆ ಮಾಡಿಸಿಕೊಂಡಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸ.ನಂ.25 ರ ಜಮೀನನ್ನು ಸ.ನಂ.72 ರ ಜಮೀನಾಗಿ ಅಕ್ರಮವಾಗಿ 7 ನೇ ಪ್ರತಿವಾದಿ ಮಾಡಿಸಿಕೊಂಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರೆವಿನ್ಯೂ ಅಧಿಕಾರಿಗಳ ಮುಂದೆ ದಾಖಲೆಗಳನ್ನು ಕೋರಿ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಹದ್ದುಬಸ್ತು ಕಾರ್ಯವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಮೇಲ್ಮನವಿಗೆ ಸಲ್ಲಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಯಾವುದೇ ದಾಖಲೆ ಹಾಜರುಪಡಿಸದಿದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.25/11 ರ ಜಮೀನಿಗೆ ಸಂಬಂಧಿಸಿ ಭದ್ರ ಕಾಲುವೆಗೆ ನೋಟಿಫಿಕೇಷನ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟಿಫಿಕೇಷನ್ 7 ನೇ ಪ್ರತಿವಾದಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಳೆಯ ನಂಬರ್ ನಲ್ಲಿ ನನ್ನ ಹೆಸರಿಗೂ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

ನಾನು ಪಂಚಾಯ್ತಿ ಸದಸ್ಯನಾಗಿದ್ದೆ ಎಂದರೆ ಸರಿ. ನಾನು ಜನರಿಗೆ ಮನೆ ಮಂಜೂರು ಮಾಡಿಕೊಡುತ್ತೇನೆ ಎಂದರೆ ಸರಿಯಲ್ಲ. ಸ.ನಂ.25/11 ಮತ್ತು 25/12 ರ ಜಮೀನುಗಳಿಗೆ ಸಂಬಂಧಿಸಿದಂತೆ ಪೋಡು ಸರಿ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 7 ನೆ ಪ್ರತಿವಾದಿ ಸ.ನಂ.25/12 ರ ಹೊಸ ನಂಬರ್ 73 ರ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಸ.ನ.25/11 ಹೊಸ ನಂ.72 ರ ಜಮೀನಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.73 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸ.ನಂ.25/11 ಹೊಸ ನಂ.72 ಜಮೀನಿನಲ್ಲಿ ನನ್ನ ಅಣ್ಣ ಸ್ವಾಧೀನದಲ್ಲಿ ಇದ್ದಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.25/11 ರಲ್ಲಿ ನಾನು ಬಗರ್ ಹುಕುಂ ಸಾಗುವಳಿ ಮಾಡಿರುತ್ತೇನೆ ಎಂದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸ.ನಂ.25/2 ರ ಜಮೀನು ಮೊದಲಿಗೆ ಯಾರಿಗೆ ಮಂಜೂರು ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 7 ನೇ ಪ್ರತಿವಾದಿಗೆ ಸ.ನಂ.73 ರ ಬದಲಿ 72 ಎಂದು ಸುಳ್ಳು ಮಾಹಿತಿ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.72 ರ ಜಮೀನು ಪ್ರತಿವಾದಿಗೆ ಸೇರಿದ್ದು, ಸದರಿ ಜಮೀನನ್ನು ಪಾಲು ವಿಭಾಗದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ.ನಂ.25/3 ರ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.25/3 ರ ಜಮೀನು 72 ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.25/3 ರ ಜಮೀನು ಭದ್ರಾ ಕಾಲೋನಿಗೆ ಭೂ ಸ್ವಾಧೀನ ಆಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹೊಸದುರ್ಗದ ಇಂಜಿನಿಯರ್ ಮತ್ತು ಚಿತ್ರದುರ್ಗದ ಇಂಜಿನಿಯರ್ ಗಳು ಜಂಟಿ ಸರ್ವೆ ಮಾಡಿ ದಾಖಲೆಯನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿ. ಸದರಿ ವರದಿಯಲ್ಲಿ 7 ನೇ ಪ್ರತಿವಾದಿಯು ಸ.ನಂ.72 ರಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಸ.ನಂ.25/2 ರ ಜಮೀನಿಗೆ ಸಂಬಂಧಿಸಿ ನಾನು ಹನಿ ನೀರಾವರಿ ಮಾಡಲು ಸಾಲ ಪಡೆದಿದ್ದು, ಸ.ನಂ.72 ಕ್ಕೆ ಸಂಬಂಧಿಸಿ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಳೆಯ ನಂಬರ್ ನಲ್ಲಿ ಸಾಲ ಪಡೆದಿದ್ದೆ ಎಂದು ನುಡಿಯುತ್ತಾರೆ. 1 ರಿಂದ 6 ನೇ ಪ್ರತಿವಾದಿಯರು ಹೊರಡಿಸಿರುವ ಆದೇಶಗಳ ಪ್ರಕಾರ ಜಮೀನಿನ ಸ.ನಂಬರ್

ನಲ್ಲಿ ವ್ಯತ್ಯಾಸ ಇರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಂಟಿ ಸರ್ವೆಯಲ್ಲಿ 7 ನೇ ಪ್ರತಿವಾದಿ ಸ.ನಂ.73 ರಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ತೋರಿಸದಿದ್ದರೂ ಸಹ ಆ ರೀತಿ ತೋರಿಸಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.72 ರ ಪರಿಹಾರ ಧನವನ್ನು ನನಗೆ ಕೊಡುವ ಬದಲು 7 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.25/2 ರಲ್ಲಿ ಭದ್ರಾ ಕಾಲುವೆ ಹೋಗಿಲ್ಲ ಮತ್ತು ಆ ಬಗ್ಗೆ ನೋಟಿಫಿಕೇಷನ್ ಆಗಿಲ್ಲ ಮತ್ತು ನನಗೆ ಪರಿಹಾರ ಧನ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ.
ಹೊಸದುರ್ಗ .